**ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ**

**ಸಿ.ಸಿ. ನಂ. 1379/2024 ಸಿ. ಡಬ್ಲ್ಯೂ 11 ಪಿ ಡಬ್ಲ್ಯೂ ಃ 11**

ಸಾಕ್ಷಿಯ ಹೆಸರು ಃ ಶಂಕ್ರವ್ವ ಮುತ್ತೆಣ್ಣನವರ

ಗಂಡನ ಹೆಸರು ಃ ಮುದುಕಪ್ಪ

ವಯಸ್ಸು ಃ 55 ವರ್ಷ

ಉದ್ಯೋಗ ಃ ಗೃಹಿಣಿ.

ವಾಸಸ್ಥಳ ಃ ಗುಡಿಕಟ್ಟಿ, ಬೈಲಹೊಂಗಲ ತಾಲೂಕ.

ದಿನಾಂಕಃ 25/07/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಸ ಸ ಅ ರವರಿಂದ ಃ**

1. ಚಾಸಾ 1, 6, 8 ರಿಂದ 10 ರ ಪರಿಚಯವಿದೆ. ಚಾಸಾ 7 ನನಗೆ ಪರಿಚಯವಿಲ್ಲ. ಆರೋಪಿಯ ಪರಿಚಯವಿಲ್ಲ. ರಸ್ತೆ ಅಪಘಾತವಾಗಿದ್ದು ದಿನಾಂಕ ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ಚಾಸಾ 1 ದೂರು ಕೊಟ್ಟಿರುತ್ತಾರೆ. ಪೋಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ.

( ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿದಂತೆ ನೀಡಲಾಯಿತು).

**ಪಾಟೀ ಸವಾಲು: ಮಾನ್ಯ ಸ ಸ ಅ ರವರಿಂದ ಃ**

2. ದಿಃ 22-05-2024 ರಂದು ನಾನು, ಚಾಸಾ 1, 6, 8 ರಿಂದ 10 ಅವರು ಉಕ್ಕಡಗಾತ್ರಿ ಜಾತ್ರೆಗೆ ಹೋಗಲು ಧಾರವಾಡ ಬಸ್ ನಿಲ್ದಾಣಕ್ಕೆ ಬಂದು ನಾನು ಮತ್ತು ಚಾಸಾ 1 ಅವರು ಧಾರವಾಡದಿಂದ ರಾಣೆಬೆನ್ನೂರಗೆ ಟಿಕೆಟ್ ತೆಗೆದುಕೊಂಡು ಬಸ್ಸ್ ನಂಬರ ಕೆಎ-25-ಎಫ್-3391 ರಲ್ಲಿ ಹೊರಟೇವು. ಸದರಿ ಬಸ್ ಹುಬ್ಬಳ್ಳಿಯಿಂದ ಶಿಗ್ಗಾಂವ್ ಕಡೆಗೆ

ಹೋಗುತ್ತಿದ್ದಾಗ ತಡಸ ಹತ್ತಿರ ಇರುವ ಯಾತ್ರಿ ನಿವಾಸ ಹೋಟೇಲ್ ನಲ್ಲಿ ತಿಂಡಿ ತಿನ್ನಲು ನಿಲ್ಲಿಸುತ್ತೇವೆ ಎಂದು ಚಾಲಕನು ಹೇಳಿ ಬಸ್ಸನ್ನು ಹೈವೆಯಿಂದ ಹೋಟೇಲ್ ಕಡೆಗೆ ವೇಗವಾಗಿ ನಡೆಸಿಕೊಂಡು ಹೋಗಿ ರಸ್ತೆಯಲ್ಲಿರುವ ರಸ್ತೆ ಹಂಪ್ಸ್ ನ್ನು ಜಂಪ್ ಮಾಡಿದ್ದರಿಂದ ಬಸ್ಸಿನ ಕೊನೆಯ ಸೀಟ್ ನಲ್ಲಿ ಕುಳಿತಿದ್ದ ಚಾಸಾ 1 ಮತ್ತು 6 ಪುಟಿದು ಬಿದ್ದಿದ್ದರಿಂದ, ಚಾಸಾ 6 ರವರ ಸೊಂಟಕ್ಕೆ ಭಾರಿ ಪೆಟ್ಟಾಗಿದ್ದು, ಚಾಸಾ 1 ಅವರಿಗೆ ಸಣ್ಣ ನೋವಾಗಿದ್ದು ಬಸ್ಸನ ಚಾಲಕನು ಅವರಿಗೆ ನಮಗೆ ತಿಂಡಿ ಮಾಡಿಸಿ ಬಸ್ಸನಲ್ಲಿ ಹತ್ತಿಸಿಕೊಂಡು ಶಿಗ್ಗಾಂವ್ ಗೆ ಕರೆದುಕೊಂಡು ಹೋಗಿ ಆಟೋ ಮಾಡಿ ಶಿಗ್ಗಾಂವ್ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರೆಂದು ಹೇಳಿದ ಕೂಡಲೇ ನಾನು ಮತ್ತು ಚಾಸಾ 8 ರಿಂದ 10 ಅವರು ಶಿಗ್ಗಾಂವ್ ಆಸ್ಪತ್ರೆಗೆ ಹೋದಾಗ ಚಾಸಾ 6 ಅವರಿಗೆ ಪೆಟ್ಟಾದ ವಿಚಾರವನ್ನು ನಾವು ನೋಡಿದೇವು ಎಂದು ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ಈಗ ಓದಿಸಿ ಕೇಳಿಸಿಕೊಂಡ ನಿಪಿ. 11 ರಂತೆ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲ ವಿಚಾರ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಮ್ ಬಿ ಬಿ ವಕೀಲರಿಂದ ಃ ಇಲ್ಲ.**

**ಮರು ವಿಚಾರಣೆ ಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.